ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1434

ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)

ಉತ್ತರಿಸುವ ದಿನಾಂಕ : 23.09.2021.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಸಾಕ್ಷ್ಯಚಿತ್ರ, ಕಿರುಚಿತ್ರ, ವ್ಯಕ್ತಿ ಚಿತ್ರಗಳು ಅಂದರೆ ಏನು; ಇವುಗಳಿಗೆ ಇರುವ ವ್ಯತ್ಯಾಸವೇನು;	ಸಾಕ್ಷ್ಯಚಿತ್ರ: ಯಾವುದೇ ವಿಷಯದ ಕುರಿತ ಮಾಹಿತಿಯನ್ನು ದೃಶ್ಯ ಸಾಕ್ಷ್ಯಗಳೊಂದಿಗೆ, ಹಿನ್ನಲೆ ನಿರೂಪಣೆಯೊಂದಿಗೆ ಪ್ರೇಕ್ಷಕರಿಗೆ ಉದ್ದೇಶಿತ ವಿಷಯವು ಮನದಟ್ಟಾಗುವಂತೆ ಮಾಡಿಕೊಡುವ ದೃಶ್ಯಚಿತ್ರವೇ ಸಾಕ್ಷ್ಯಚಿತ್ರ. ವಿಷಯವನ್ನು ಸಂಕ್ಷಿಪ್ತವಾಗಿ ಅಥವಾ ದೀರ್ಘವಾಗಿ ಚಿತ್ರೀಕರಿಸಿ ವಿವರಣೆಯೊಂದಿಗೆ ಎರಡು ನಿಮಿಷಗಳ ಅವಧಿಯಿಂದ 70 ನಿಮಿಷಗಳ ಅವಧಿಯಲ್ಲಿ ನಿರ್ಮಿಸಬಹುದಾಗಿದೆ. ಕಿರುಚಿತ್ರ: ಯಾವುದೇ ವಿಷಯದ ಕುರಿತ ಮಾಹಿತಿಯನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಧೀರ್ಘ ನಿರೂಪಣೆ ಇಲ್ಲದೇ ಘೋಷಣಾ ರೂಪದ ಸಾಹಿತ್ಯದೊಂದಿಗೆ ದೃಶ್ಯಗಳನ್ನು ಚಿತ್ರೀಕರಿಸಿ, 10, 30, 40, 60 ಸೆಕೆಂಡ್ ನಿಂದ, 120 ಸೆಕೆಂಡ್ ಅವಧಿಯ ದೃಶ್ಯಚಿತ್ರವೇ ಕಿರುಚಿತ್ರ. ವ್ಯಕ್ತಿಚಿತ್ರ: ಸಾಧಕರ ಕುರಿತ ಜೀವಮಾನ ಸಾಧನೆ, ಬದುಕಿನ ವಿಶೇಷ, ಅವರ ವ್ಯಕ್ತಿತ್ವ ಇತ್ಯಾದಿ ವಿವರಗಳೊಂದಿಗೆ ಅವರ ಸಂದರ್ಶನ, ಅವರು ಇಲ್ಲವಾದಲ್ಲಿ ಅವರನ್ನು ಅತ್ಯಂತ ನಿಕಟವಾಗಿ ಬಲ್ಲ ವ್ಯಕ್ತಿಗಳ ಸಂದರ್ಶನ, ಇತ್ಯಾದಿಗಳನ್ನು, ಹಿನ್ನಲೆ ನಿರೂಪಣೆಯೊಂದಿಗೆ ಚಿತ್ರೀಕರಿಸಿದ ದೃಶ್ಯಚಿತ್ರಗಳೇ ವ್ಯಕ್ತಿಚಿತ್ರ. ಐದು ನಿಮಿಷಗಳ ಅವಧಿಯಿಂದ 120 ನಿಮಿಷಗಳ ಅವಧಿಯಲ್ಲಿ ನಿರ್ಮಿಸಬಹುದಾಗಿದೆ.
(ಆ)	ರಾಜ್ಯದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಎಷ್ಟು ಸಾಕ್ಷ್ಯಚಿತ್ರ, ಕಿರುಚಿತ್ರ, ವ್ಯಕ್ತಿಚಿತ್ರ ಇತರೆಗಳನ್ನು ನಿರ್ಮಿಸಲಾಗಿದೆ; (ವರ್ಷವಾರು, ಸಿ.ಡಿ.ಗಳ ಸಮೇತ ಮಾಹಿತಿಯನ್ನು ನೀಡುವುದು)	ವಾರ್ತಾ ಇಲಾಖೆಯು ಸಂದರ್ಭಕ್ಕೆ ಅನುಗುಣವಾಗಿ ಸಾಕ್ಷ್ಯಚಿತ್ರ, ಕಿರುಚಿತ್ರ, ವ್ಯಕ್ತಿಚಿತ್ರ ಹಾಗೂ ಇನ್ನಿತರ ಚಿತ್ರಗಳನ್ನು ನಿರ್ಮಿಸುತ್ತದೆ. ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳ ಅನ್ವಯ ಒಟ್ಟಾರೆ 1821ಕ್ಕೂ ಹೆಚ್ಚು ಸಾಕ್ಷ್ಯ ಚಿತ್ರ, ಕಿರುಚಿತ್ರ, ಟಿ.ವಿ ಸ್ಪಾಟ್ಸ್ ಮತ್ತು ವ್ಯಕ್ತಿಚಿತ್ರಗಳನ್ನು ನಿರ್ಮಿಸಲಾಗಿದೆ, ವಿಡಿಯೋಚಿತ್ರಗಳನ್ನು ಸಿ.ಡಿಯಲ್ಲಿ ಶೇಖರಿಸಿ ನೀಡಲು ತಾಂತ್ರಿಕವಾಗಿ ಸಾಧ್ಯವಲ್ಲ, ಆದುದರಿಂದ ಇಲಾಖೆ ನಿರ್ಮಿಸಿರುವ ಪ್ರಮುಖ 300ಕ್ಕೂ ಹೆಚ್ಚು ಸಾಕ್ಷ್ಯಚಿತ್ರಗಳನ್ನು ಇಲಾಖೆಯ ಯೂಟ್ಯೂಬ್ Karnataka Information ಚಾನಲ್ ನಲ್ಲಿ ವೀಕ್ಷಿಸಬಹುದಾಗಿದೆ. ಇನ್ನುಳಿದ ಸಾಕ್ಷ್ಯ/ವ್ಯಕ್ತಿ ಚಿತ್ರಗಳನ್ನು ಯೂಟ್ಯೂಬ್ ಗೆ Upload ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

(ಇ)	ಇವುಗಳನ್ನು ನಿರ್ಮಾಣ ಮಾಡಲು ಇರುವ ಮಾನದಂಡಗಳೇನು;	ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಬಿಂಬಿಸುವ ಕಿರುಚಿತ್ರ ಮತ್ತು ಸಾಕ್ಷ್ಯ ಚಿತ್ರ, ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ/ವಿಶಿಷ್ಟ ಸಾಧನೆ ಮಾಡಿದ ಸಾಧಕರ, ನಾಡಿನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ, ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ಪಡೆದಿರುವ ಸಾಧಕರ ಜೀವನ ಸಾಧನೆಗಳನ್ನು ಬಿಂಬಿಸುವ ವ್ಯಕ್ತಿಚಿತ್ರ, ರಾಜ್ಯದ ಪ್ರವಾಸಿ ತಾಣಗಳನ್ನು, ಪ್ರೇಕ್ಷಣೆಯ ಸ್ಥಳಗಳನ್ನು ಪರಿಚಯಿಸುವ ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸಲಾಗುತ್ತದೆ ಈ ಸಾಕ್ಷ್ಯ ಚಿತ್ರ, ಕಿರುಚಿತ್ರ ಮತ್ತು ವ್ಯಕ್ತಿಚಿತ್ರಗಳನ್ನು ನಿರ್ಮಿಸಲು ಕ್ಷೇತ್ರದಲ್ಲಿನ ಪರಿಣಿತಿ, ವಿದ್ಯಾರ್ಹತೆ ಮತ್ತು ಅನುಭವದ ಅಧಾರದ ಮೇಲೆ ನೀಡಲಾಗುತ್ತದೆ. ಡಿಪ್ಲೋಮೋ ಇನ್ ಸಿನಿಮಾಟೋಗ್ರಫಿ ಹೊಂದಿರುವ ಅನುಭವಿಗಳಿಗೆ ಹೆಚ್ಚಿನ ಆದ್ಯತೆ, ಕೆಲವೊಮ್ಮೆ ವಿದ್ಯಾರ್ಹತೆ ಹೊಂದಿರುವ ಹೊಸಬರಿಗೂ ಅವಕಾಶ ನೀಡಲಾಗಿದೆ.
(ಈ)	ಈ ಚಿತ್ರಗಳಿಗೆ ಸರ್ಕಾರದಿಂದ ದೊರೆತಿರುವ ಸಹಾಯಧನವೆಷ್ಟು? (ವಿವರವಾದ ಮಾಹಿತಿಯನ್ನು ನೀಡುವುದು)	ಇಲಾಖೆವತಿಯಿಂದ ನಿರ್ಮಿಸುವ ಸಾಕ್ಷ್ಯ ಚಿತ್ರ, ಕಿರುಚಿತ್ರ ಮತ್ತು ವ್ಯಕ್ತಿಚಿತ್ರಗಳನ್ನು ನಿರ್ಮಿಸಲು ನಿರ್ಮಾಣ ವೆಚ್ಚವನ್ನು ಮಾತ್ರ ಭರಿಸಲಾಗುವುದು. ಈ ಚಿತ್ರಗಳಿಗೆ ಸಹಾಯಧನ ನೀಡುವ ಯಾವುದೇ ಯೋಜನೆ ಇಲಾಖೆಯಲ್ಲಿ ಇರುವುದಿಲ್ಲ.

ಸಂಖ್ಯೆ: ಕೆಸಿಐ-ಪಿಐಪಿ/264/2021

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ